ಅಲ್ಲದೆ ರೈತವರ್ಗದವರ ಮನವಿ ಮೇಲೆ ಒಂದು ನಿಗದಿತ ವೇಳೆಯಲ್ಲಿ ಮಾಡುತ್ತಿದ್ದ ನಿಲುಗಡೆಯಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿ ಒಂದು ದಿನ ಬೆಳಗಿನ ೬ ರಿಂದ ಮಧ್ಯಾಹ್ನ ೨ ರವರೆವೆಗೂ ಮಾರನೆಯ ದಿನ ಬೆಳಗಿನ ೯ ರಿಂದ ಸಂಜೆ ೫ ರವರೆಗೆ ಮಾಡುವ ಏರ್ಪಾಡು ಮಾಡಲಾಗಿದೆ. ವಿದ್ಯುತ್ ಕೊರತೆ ತುಂಬಾ ಅಧಿಕವಾಗಿರುವುದರಿಂದ ರೈತವರ್ಗದವರೂ ಸಹಕರಿಸಬೇಕು.

ಕೈಗಾರಿಕೆ ಹಾಗೂ ಕೃಷಿಗೆ ವಿದ್ಯುತ್ ಸರಬರಾಜಿನ ಬಗ್ಗೆ.

೮೪೪. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗ್ರಾಮಾಂತರ ಪ್ರದೇಶಗಳ ಕೈಗಾರಿಕೆಗಳು ಪೂರ್ಣವಾಗಿ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ವಿದ್ಯುತ್ ಸರಬರಾಜಿನಲ್ಲಿ ಗ್ರಾಮಾಂತರ ಮತ್ತು ನಗರ ಪ್ರದೇಶ ಎಂದು ವಿಂಗಡಣೆ ಮಾಡಿರುವುದರಿಂದ ಗ್ರಾಮಾಂತರ ಪ್ರದೇಶಗಳ ಕೈಗಾರಿಕೆ ಹಾಗೂ ಕೃಷಿಗೆ ತೊಂದರೆಯಾಗಿರುವುದು ನಿಜವಲ್ಲವೆ.

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಬಂದಿಲ್ಲ.

ಆ) ವಿದ್ಯುತ್ ಸರಬರಾಜಿನಲ್ಲಿ ಗ್ರಾಮಾಂತರ ಮತ್ತು ನಗರ ಎಂದು ವಿಂಗಡಣೆ ಮಾಡಿಲ್ಲ. ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಕಡಿತ ವಿಧಿಸಿಲ್ಲ. ಆದರೆ ಉಳಿದೆಲ್ಲಾ ವರ್ಗದ ಗ್ರಾಹಕರಿಗೂ (ವಿದ್ಯುತ್ ಚಿತಾಗಾರ ಉಳಿದು) ಬಳಕೆ ಮೇಲೆ ಕಡಿತ ವಿಧಿಸಲಾಗಿದೆ ಇದರಿಂದ ವಿದ್ಯುತ್ ಕೊರತೆ ಕೆಲ ಭಾಗ ತುಂಬಲಾಗಿದೆ ಗ್ರಾಮಾಂತರ ಪ್ರದೇಶಗಳ ಫೀಡರ್‌ನ ಮೇಲೆ ಪಂಪು ಸೆಟ್ಟುಗಳ ಲೋಡ್ ಅಧಿಕವಾಗಿದ್ದು ಕೈಗಾರಿಕೆಗಳ ಲೋಡ್ ತುಂಬಾ ಕಡಿಮೆ ಬಳಕೆ ಮೇಲೆ ಕಡಿತ ವಿಧಿಸಿರುವುದರಿಂದ ನಗರ ಪ್ರದೇಶದ ಎಲ್ಲಾ ವರ್ಗದ ಗ್ರಾಹಕರು ಕೊರತೆ ತುಂಬಲು ಸಹಕಾರ ನೀಡಿದ್ದಾರೆ ಆದರಂತೆ ಗ್ರಾಮೀಣ ಪ್ರದೇಶಗಳಲ್ಲಿ ಪಂಪುಸೆಟ್ಟು ಗ್ರಾಹಕರಿಂದಲೂ ಕೊರತೆ ತುಂಬಲು ಸಹಕಾರ ಅಗತ್ಯ ಆದರೆ ಇವರ ಬಳಕೆ ಮೇಲೆ ನಿರ್ಬಂಧ ಇಲ್ಲದಿರುವುದರಿಂದ ಆ ಪ್ರದೇಶಗಳಲ್ಲಿ ದಿನಕ್ಕೆ ೮ ಗಂಟೆ ಕಾಲ ವಿದ್ಯುತ್ ನಿಲುಗಡೆ ಮಾಡಿ ಕೊರತೆ ಭರಿಸಲು ಯತ್ನಿಸಲಾಗಿದೆ. ದಿನದಲ್ಲಿ ಉಳಿಕೆ ೧೬ ಗಂಟೆ ವಿದ್ಯುತ್ ಲಭ್ಯವಿರುವುದರಿಂದ ತೊಂದರೆಯಾಗುವುದಿಲ್ಲ. ಈಗ ನಗರ ಪ್ರದೇಶಗಳಲ್ಲಿ ಸಹ ದಿನ ಎರಡು ಗಂಟೆಗಳ ಕಾಲ ಲೋಡ್ ಪೆಡಿಂಗ್ ಕೊಡುವಂತೆ ಮಂಡಳಿಗೆ ಸೂಚನೆ ಕೊಡಲಾಗಿದೆ. ವಿದ್ಯುತ್ ಪರಿಸ್ಥಿತಿ ಕಷ್ಟವಾಗಿರುವುದರಿಂದ ಎಲ್ಲಾ ವರ್ಗದ ಗ್ರಾಹಕರ ಸಹಕಾರವು ಅಗತ್ಯ.

ಇ) ಈ ಹಿಂದೆ ವಿದ್ಯುತ್ ನಿಲುಗಡೆ ಒಂದೇ ನಿರ್ದಿಷ್ಟ ವೇಳೆಯಲ್ಲಿ ಮಾಡಲಾಗುತ್ತಿದ್ದು ರೈತ ವರ್ಗದವರ ಮನವಿ ಮೇಲೆ ವೇಳೆಯಲ್ಲಿ ಸ್ವಲ್ಪ ಮಾರ್ಪಾಟು ಮಾಡಿ ಈಗ ಒಂದು ದಿನ ಹಗಲಿನ ೬ ರಿಂದ ಮಧ್ಯಾನ್ಹ ೨ರವರೆಗೂ ಮಾರನೇ ದಿನ ಬೆಳಗಿನ ೯ ರಿಂದ ಸಾಯಂಕಾಲ ೫ರ ವರೆಗೂ ವಿದ್ಯುತ್ ನಿಲುಗಡೆ ಮಾಡಲಾಗುತ್ತಿದೆ.

ರಾಜ್ಯದಲ್ಲಿನ ಭಾರೀ ಕೈಗಾರಿಕೆಗಳು.

೯೬೦. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ) —ಮಾನ್ಯ ಭಾರಿ ಕೈಗಾರಿಕೆ ಮತ್ತು ಮಧ್ಯಮ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿರುವ ಭಾರಿ ಕೈಗಾರಿಕೆಗಳೆಷ್ಟು ?